ದಿನಾಂಕಃ 12.06.2023 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿ 1 ರಿಂದ 5 ಪರ ಶ್ರೀ ಬಿ.ಎಂ.ಜೆ ವಕೀಲರಿಂದಃ**

ನಿಮ್ಮ ತಾತ ಬೋರೆಗೌಡರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು 3 ಜನ ಮಕ್ಕಳು ಎನ್ನುತ್ತಾರೆ. ಅವರುಗಳು 1 ನೆ ಸುಬ್ಬೆಗೌಡ, 2 ನೇ ಸಣ್ಣಜವೇರಗೌಡ, 3 ನೇ ಯವರು ಪುಟ್ಟಮ್ಮ. ಇವರಲ್ಲಿ ಸುಬ್ಬೇಗೌಡ ಹಾಗೂ ಸಣ್ಣಜವರೇಗೌಡ ಪೌತಿ ಯಾಗಿರುತ್ತಾರೆ ಪುಟ್ಟಮ್ಮ ಇದ್ದಾರೆ. ನಮ್ಮ ಕುಟುಂಬದಲ್ಲಿ ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತು ಎಷ್ಟು ಇರುತ್ತದೆ ಎಂದರೆ ಸಾಕ್ಷಿಯು ಒಂದೇ ಕುಟುಂಬದ ಪಿತ್ರಾರ್ಜಿತ ಸ್ವತ್ತು ಇದ್ದು ಸ.ನಂ. 30/4 ಇರುತ್ತದೆ. ಸ.ನಂ. 113 ರಲ್ಲಿ ಜವರೆಗೌಡರಿಗೆ 33 ವರೆ ಗುಂಟೆ ಮತ್ತು ಸುಬ್ಬೆಗೌಡರಿಗೆ 33 ವರೆ ಗುಂಟೆ ಸಮವಾಗಿ ಭಾಗ ಆಗಿ ಖಾತೆಯಾಗಿರುತ್ತದೆ ಎಂದರೆ ಸಾಕ್ಷಿಯು ಸ.ನಂ. 113 ಭೂ ಮಂಡಲ ನ್ಯಾಯಾ ಮಂಡಲಿಯಿಂದ ಮಂಜೂರಾದ ಜಮೀನಿದ್ದು ಸದರಿ ಜಮೀನಿಗೆ ಸಣ್ಣಜವರೆಗೌಡರು ಅಕ್ರಮವಾಗಿ ಖಾತೆ ಮಾಡಿಸಿಕೊಂಡಿದ್ದಾರೆ ಅದರಂತೆ 30/4 ಕ್ರಮವಾಗಿ ಮಾಡಿಸಿಕೊಂಡಿರುತ್ತಾರೆ. ಸದರಿ 113 ಸರ್ವೇ ನಂಬರ್ ನ ಆಸ್ತಿಗಳನ್ನು ಸದರಿ ದಾವೆಯಲ್ಲಿ ಸೇರಿಸಿದ್ದಿರಾ ಎಂದರೆ ಸಾಕ್ಷಿಯು ಸೇರಿಸಿಲ್ಲ ಸಾಕ್ಷಿ ಮುಂದುವರೆದು 30/4 ಸರ್ವೇ ನಂಬರ್ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ ಎನ್ನುತ್ತಾರೆ. ಸ.ನಂ. 30/4 ಕ್ರಯಪತ್ರದಿಂದ ಬಂದಂತ ಆಸ್ತಿ ಎಂದೆರ ಸಾಕ್ಷಿಯ ಬೋರೆಗೌಡರು ಅಂರದೆ ನನ್ನ ತಾತ ಕ್ರಯಪತ್ರದ ಮೂಖಾಂತರ ಪಡೆದುಕೊಂಡಿರುವ ಆಸ್ತಿ ಎನ್ನುತ್ತಾರೆ. ಸ.ನಂ. 140/2 ಬಿ ವಿಸ್ತೀರ್ಣ 1 ಎಕರೆ 5 ಗುಂಟೆ ಜಮೀನು ಸುಬ್ಬೆಗೌಡ ಹಾಗೂ ಸಣ್ಣಜವರೆಗೌಡರ ವಿಭಾಗ ಮುಖಾತಂರ ಬಂದಿದ್ದ ಆಸ್ತಿ ಎಂದರೆ ಸಾಕ್ಷಿಯ ನನ್ನ ತಾಯಿಯ ಕುಂಕುಮ ಭಾಗ್ಯಕ್ಕೆ ಬಸವೆಗೌಡರ ಮಗ ಜವರೆಗೌಡರವರು ನಮ್ಮ ತಾಯಿಯಾದ ಪುಟ್ಟಮ್ಮ ನವರಿಗೆ ನಮ್ಮ ಗಳನ್ನು ಮೈನರ್

ಎಂದು ತೋರಿಸಿ ಪುಟ್ಟಮ್ಮ ನಿಗೆ ಕ್ರಯ ಆದಂತ ಆಸ್ತಿ. ಸದರಿ ಆಸ್ತಿಯನ್ನು ಸಣ್ಣಜವರೆಗೌಡರು ಹಾಗೂ ಸುಬ್ಬೆಗೌಡರು ಭಾಗ ಆದ ನಂತರ ಖರೀದಿ ಮಾಡಿದ ಆಸ್ತಿ 140/2 ಬಿ ಇರುತ್ತದೆ. ಆದ್ದರಿಂದ ಸದರಿ ಜಮೀನು ನಿಮ್ಮ ಸ್ವಾಧಿನದಲ್ಲಿರುತ್ತದೆ ಎಂದರೆ ಸರಿ . ಸಣ್ಣಜವರೆಗೌಡರ ಭಾಗಕ್ಕೆ ಹೋಗಿರುವುದಿಲ್ಲ ಎಂದರೆ ಸರಿ . ಸ.ನಂ. 139/1 ಬಿ ಅದರಲ್ಲಿ 20 ಗುಂಟೆ ಜಮೀನು ನಿಮ್ಮ ಸ್ವಾಧಿನದಲ್ಲಿರುತ್ತದೆ ಎಂದರೆ ಸರಿ . ಅದರಂತೆ ಸದರಿ 139/1 ಬಿ ಸರ್ವೇ ನಂಬರ್ ನಲ್ಲಿ 20 ಗುಂಟೆ ಜಮೀನು ಸಣ್ಣಜವರೆಗೌಡರ ಭಾಗಕ್ಕೆ ಹೋಗಿರುತ್ತದೆ ಎಂದರೆ ಸರಿ . ಸದರಿ ಆಸ್ತಿಯನ್ನು ಪ್ರತಿವಾದಿಗಳು ಅವರ ಭಾಗದ 20 ಗುಂಟೆ ಆಸ್ತಿಯನ್ನು ಮಾರಾಟ ಮಾಡಿಕೊಂಡಿರುತ್ತಾರೆ ಎಂದರೆ ಸರಿ . ಸದರಿ ಆಸ್ತಿಯನ್ನು ಪ್ರಸ್ತುತ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ . ಸ.ನಂ. 113 ರಲ್ಲಿ 1 ಎಕರೆ 38 ಗುಂಟೆ ಜಮೀನಿನಲ್ಲಿ 33 ವರೆ ಗುಂಟೆ ಜಮೀನು ಸಣ್ಣಜವರೆಗೌಡರ ಭಾಗಕ್ಕೆ ಹಾಗೂ ಸುಬ್ಬೆಗೌಡರ ಭಾಗಕ್ಕ್ಷೆ ಅಕ್ರಮ ವಾಗಿ ಖಾತೆ ಮಾಡಿಸಿಕೊಂಡು ಅವರವರ ಜಮೀನಲ್ಲಿರುತ್ತಾರೆ. ಪ್ರತಿವಾದಿಗೆ ಸೇರಿದಂತಹ ಆಸ್ತಿ 113 ರಲ್ಲಿ 33 ವರೆ ಗುಂಟೆ, 139/1 ರಲ್ಲಿ 20 ಗುಂಟೆ ಹಾಗೇ ದಾವಾ ಆಸ್ತಿ 30/4 ರಲ್ಲಿ 1 ಎಕರೆ 38 ಗುಂಟೆ ಇದು ಪ್ರತಿವಾದಿ ಭಾಗಕ್ಕೆ ಹೋದಂತ ಆಸ್ತಿ ಮತ್ತು ಉಳಿದಂತ ಆಸ್ತಿ ನಿಮ್ಮ ಭಾಗದ್ದು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅದರಂತೆ ನಿಮ್ಮ ಭಾಗದ ಅಂದರೆ ಸ.ನಂ. 113 ರಲ್ಲಿ 33 ವರೆ ಗುಂಟೆ, 140/2 ಬಿ ರಲ್ಲಿ 1 ಎಕರೆ 5 ಗುಂಟೆ, 139/1 ಬಿ ನಲ್ಲಿ 20 ಗುಂಟೆ ಆಸ್ತಿ ಎಂದರೆ ಸರಿ . ನಿಮ್ಮ ದಾವೆ ಉದ್ದೇಶ ಪೂರ್ವಕವಾಗಿ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ನಿಮಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ದಾವೆಯನ್ನು ಹಾಕಿರುತ್ತೀರಿ

ಎಂದ ರೆಸ ಸರಿಯಲ್ಲ. ದಾವಾ ಆಸ್ತಿಗೂ ನಿಮಗೂ ಯಾವುದೇ ಸಂಬಂಧ ಇಲ್ಲ ನೀವು ಸ್ವಾಧಿನದಲ್ಲಿ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ